**Misc. No:01/2023**
**PW:1**

(ಇಂದು ದಿನಾಂಕಃ **18-03-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್ ಎಂ ಕೆ ವಕೀಲರಿಂದ**

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| **ನಿ.ಪಿ 2** | ಮೂಲ ದಾವಾ ಸಂಃ 88/2020 ರಲ್ಲಿಯ ಆದೇಶ ಪುಟದ ದೃಡಿಕೃತ ನಕಲು. |

**ಪಾಟೀ ಸವಾಲುಃ ಶ್ರೀ ವಿ ಪಿ ಪಿ ವಕೀಲರಿಂದಃ**

ಸದರಿ ಮೂಲ ದಾವಾ ಸಂಃ 88/2020 ರಲ್ಲಿ ದಾಖಲೆಗಳನ್ನು ಹಾಜರು ಪಡಿಸಲು ನಾನು ಮಧ್ಯಂತರ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ಪುರಸ್ಕೃತವಾದ ನಂತರ ನನ್ನ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ನಿಗದಿಪಡಿಸಲಾಗಿತ್ತು ಎಂದರೆ ಸರಿ. ದಿನಾಂಕಃ 28-09-2022 ರಂದು ನಾನು ನ್ಯಾಯಾಲಯಕ್ಕೆ ಗೈರು ಹಾಜರಾದ ಕಾರಣ ರೂ. 500/- ದಂಡ ವಿಧಿಸಿ ಪ್ರಕರಣ ಮುಂದುಡಲಾಗಿತ್ತು ಎಂದರೆ ಸರಿಯಲ್ಲ. ನಂತರ ದಿನಾಂಕಃ 27-10-2022 ರಂದು ನನ್ನ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ನಿಗದಿಪಡಿಸಲಾಗಿತ್ತು ಎಂದರೆ ಸರಿ. ಸದರಿ ದಿನವೂ ಸಹ ನಾನು ನ್ಯಾಯಾಲಯಕ್ಕೆ ಗೈರು ಹಾಜರಾಗಿ ದಂಡವನ್ನೂ ಸಹ ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಾರಣ ನ್ಯಾಯಾಲಯ ಪುನಃ ರೂ. 500/- ದಂಡ ವಿಧಿಸಿ ಪ್ರಕರಣ ಮುಂದುಡಲಾಗಿತ್ತು ಎಂದರೆ ಸರಿಯಲ್ಲ. ನಂತರ ದಿನಾಂಕಃ 17-11-2022 ರಂದು ಸಹ ನಾನು ಗೈರು ಹಾಜರಾಗಿದ್ದೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆ ಸಲ್ಲಿಸಿದ್ದು, ಕಾರಣ ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದೆ ಎಂದರೆ ಸರಿಯಲ್ಲ. ಸದರಿ ದಿನ ನಮ್ಮ ವಕೀಲರು ಬೇರೆ ಪ್ರಕರಣದಲ್ಲಿ ನಿರತರಾಗಿದ್ದರ ಕುರಿತು ನಾನು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸದೇ ಮೌನವಾಗಿ ನಿಂತಿರುತ್ತಾರೆ. ನನ್ನ ಅನಾರೋಗ್ಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸದೇ ಮೌನವಾಗಿ ನಿಂತಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿ ಟಿ ಕೆ ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**